ಈ ಲೇಖನದ ವಿಷಯಾನುಕ್ರಮಣಿಕೆ


**ಜ್ಯೇಷ್ಠಮಾಸದಲ್ಲಿ ಜ್ಯೇಷ್ಠಸಂತಾನದ ವಿವಾಹ** **2**

**ದ್ವಿಜ್ಯೇಷ್ಠ ತ್ರಿಜ್ಯೇಷ್ಠ ಎಂಬ ಶಬ್ದಗಳ ಅರ್ಥ** **3**

**ನಿಷಿದ್ಧ ದ್ವಿಜ್ಯೇಷ್ಠ** **5**

**ಮಧ್ಯಮ ದ್ವಿಜ್ಯೇಷ್ಠ** **6**

**ವಿಹಿತ ದ್ವಿಜ್ಯೇಷ್ಠ** **7**

**ತ್ರಿಜ್ಯೇಷ್ಠ ಸರ್ವಥಾ ನಿಷಿದ್ಧ** **8**

ಉದಾಹರಣೆ — 1 8

ಉದಾಹರಣೆ — 2 9

ಉದಾಹರಣೆ — 3 10

**ಜ್ಯೇಷ್ಠಸಂತಾನಕ್ಕೆ, ಮದುವೆಗೆ ಮಾತ್ರ ಈ ಗಣನೆ** **11**

**ಒಂದು ಕಿವಿಮಾತು** **12**

138 ನೇ ಪ್ರಶ್ನೋತ್ತರ

# ಜ್ಯೇಷ್ಠಮಾಸದಲ್ಲಿ ಜ್ಯೇಷ್ಠಸಂತಾನದ ವಿವಾಹ

ಜ್ಯೇಷ್ಠ ಮಾಸದಲ್ಲಿ ಜ್ಯೇಷ್ಠಪುತ್ರನ ಮದುವೆ ಮಾಡಬಹುದೇ[1]?

**– ಕೆ. ಶ್ರೀವತ್ಸ**

ಪೂಜ್ಯರೇ, ನಾನು ಜ್ಯೋತಿಷ್ಯವನ್ನು ಕಲಿಯುತ್ತಿದ್ದೇನೆ. ದ್ವಿಜ್ಯೇಷ್ಠ, ತ್ರಿಜ್ಯೇಷ್ಠಗಳ ಕುರಿತು ತುಂಬ ಗೊಂದಲವಿದೆ.  ತಾವು ಶಬ್ದಗಳ ಅರ್ಥ ಮತ್ತು ಅದರ ಕುರಿತ ಮಾಹಿತಿಯನ್ನು ನೀಡಬೇಕಾಗಿ ಪ್ರಾರ್ಥನೆ. ತಮ್ಮ ಕರಾರುವಾಕ್ಕಾದ ಶೈಲಿ ನನಗೆ ತುಂಬ ಇಷ್ಟ.

**– ಸುಧಾಕರ, ಬೆಂಗಳೂರು.**

[1] ಶ್ರೀವತ್ಸರವರೇ, ಪುಟ ಆರರಲ್ಲಿ ನಿಮ್ಮ ಪ್ರಶ್ನೆಗೆ ಉತ್ತರವಿದೆ.

## ದ್ವಿಜ್ಯೇಷ್ಠ ತ್ರಿಜ್ಯೇಷ್ಠ ಎಂಬ ಶಬ್ದಗಳ ಅರ್ಥ

ದ್ವಿಜ್ಯೇಷ್ಠ ಎಂದರೆ ಎರಡು ಜ್ಯೇಷ್ಠಗಳು.
ತ್ರಿಜ್ಯೇಷ್ಠ ಎಂದರೆ ಮೂರು ಜ್ಯೇಷ್ಠಗಳು.

ಮೇಲಿನ ಈ ಶಬ್ದಗಳಲ್ಲಿ ಜ್ಯೇಷ್ಠ ಎನ್ನುವ ಶಬ್ದ ಮೂರು ಅರ್ಥಗಳಲ್ಲಿ ಪ್ರಯೋಗಗೊಂಡಿವೆ.

### ಜ್ಯೇಷ್ಠ ಎಂದರೆ ಮೊದಲ ಸಂತಾನ.

ಮೊದಲ ಮಗು, ಗಂಡಾಗಿರಲಿ, ಹೆಣ್ಣಾಗಿರಲಿ ಜ್ಯೇಷ್ಠ ಸಂತಾನ ಎಂದು ಕರೆಸಿಕೊಳ್ಳುತ್ತದೆ.

ಗರ್ಭದಲ್ಲಿಯೇ ಮೊದಲ ಮಗು ಸತ್ತು ಹೋಗಿ, ಎರಡನೆಯ ಮಗು ಇದ್ದಾಗ, ಆ ಎರಡನೆಯ ಮಗುವೇ ಜ್ಯೇಷ್ಠ ಸಂತಾನ. ಎರಡನೆಯ ಲೆಕ್ಕ ಬರುವದಿಲ್ಲ.

ಮೊದಲನೆಯ ಮಗು ಹುಟ್ಟಿ ಒಂದೇ ದಿವಸ ಬದುಕಿ ಸತ್ತು ಹೋದರೂ, ಅದೇ ಜ್ಯೇಷ್ಠ ಸಂತಾನ. ಆ ನಂತರ ಹುಟ್ಟಿದವರು ಜ್ಯೇಷ್ಠ ಸಂತಾನವಲ್ಲ.

## ಜ್ಯೇಷ್ಠ ಎಂದರೆ ಜ್ಯೇಷ್ಠ ಮಾಸ.

ಚಾಂದ್ರಮಾಸಗಳಲ್ಲಿ ಮೂರನೆಯ ಮಾಸ ಜ್ಯೇಷ್ಠ ಮಾಸ.

## ಜ್ಯೇಷ್ಠ ಎಂದರೆ ಜ್ಯೇಷ್ಠಾ ನಕ್ಷತ್ರ.

ಇಪ್ಪತ್ತೇಳು ನಕ್ಷತ್ರಗಳಲ್ಲಿ ಹದಿನೆಂಟನೆಯ ನಕ್ಷತ್ರ.

ಈ ದ್ವಿಜ್ಯೇಷ್ಠ ತ್ರಿಜ್ಯೇಷ್ಠ ಎನ್ನುವದು ಜ್ಯೋತಿಷ್ಯದ ಮುಹೂರ್ತಭಾಗಕ್ಕೆ ಸಂಬಂಧಪಟ್ಟದ್ದು.

ಕೆಲವು ಸಂದರ್ಭದಲ್ಲಿ ಎರಡು ಜ್ಯೇಷ್ಠ ನಿಷಿದ್ಧ. ಕೆಲವು ಸಂದರ್ಭದಲ್ಲಿ ವಿಹಿತ.

ಮೂರು ಜ್ಯೇಷ್ಠಗಳಂತೂ ಸರ್ವಥಾ ನಿಷಿದ್ಧ.

ಮೂರು ಜ್ಯೇಷ್ಠವಿದ್ದಾಗ ಮದುವೆ ಮಾಡಿದಾಗ ಆ ದಂಪತಿಗಳಿಗೆ ಮಕ್ಕಳಾಗಲು ತುಂಬ ತೊಂದರೆಯಾಗುತ್ತದೆ, ಅಥವಾ ಆಗದೆಯೂ ಇರಬಹುದು. ಹೀಗಾಗಿ ತ್ರಿಜ್ಯೇಷ್ಠ ಸರ್ವಥಾ ನಿಷಿದ್ಧ.

## ನಿಷಿದ್ಧ ದ್ವಿಜ್ಯೇಷ್ಠ

ಜ್ಯೇಷ್ಠಮಗನಿಗೆ ಜ್ಯೇಷ್ಠಮಾಸದಲ್ಲಿ ಚೌಲ, ಉಪನಯನಗಳು ನಿಷಿದ್ಧ ಎಂದು ಮುಹೂರ್ತ ಚಿಂತಾಮಣಿ ತಿಳಿಸುತ್ತದೆ —

**ಋತುಮತ್ಯಾಃ ಸೂತಿಕಾಯಾಃ**
**ಸೂನೋಶ್ಚೈಲಾದಿ ನಾಚರೇತ್**
**ಜ್ಯೇಷ್ಠಾಪತ್ಯಸ್ಯ ನ ಜ್ಯೇಷ್ಠೇ**
**ಕೈಶ್ಚಿನ್ಮಾರ್ಗೇಽಪಿ ನೇಷ್ಯತೇ**

ತಾಯಿ ರಜಸ್ವಲೆ, ಗರ್ಭಿಣಿ, ಬಾಣಂತಿಯಾಗಿದ್ದಾಗ ಮಗನಿಗೆ ಚೌಲ ಉಪನಯನ, ವಿವಾಹಗಳನ್ನು ಮಾಡಬಾರದು.

ಮೊದಲ ಮಗನಿಗೆ ಜ್ಯೇಷ್ಠನಕ್ಷತ್ರ ಅಥವಾ ಜ್ಯೇಷ್ಠಮಾಸದಲ್ಲಿ ಎಂದಿಗೂ ಚೌಲ, ಉಪನಯನಗಳನ್ನು ಮಾಡಬಾರದು.

"ಕೈಶ್ಚಿನ್ಮಾರ್ಗೇಽಪಿ ನೇಷ್ಯತೇ" ಎಂದರೆ ಕೆಲವು ಜ್ಞಾನಿಗಳ ಪಕ್ಷದಲ್ಲಿಯೂ ಇದು ವಿಹಿತವಲ್ಲ, ಪೂರ್ಣ ನಿಷಿದ್ಧ ಎಂದರ್ಥ.

## ಮಧ್ಯಮ ದ್ವಿಜ್ಯೇಷ್ಠ

ಮದುವೆಗೆ ಸಂಬಂಧಿಸಿದಂತೆ ಮುಹೂರ್ತಚಿಂತಾಮಣಿ **"ಜ್ಯೇಷ್ಠದ್ವಂದ್ವಂ ಮಧ್ಯಮಂ ಸಂಪ್ರದಿಷ್ಟಮ್"** ಎಂದು ಹೇಳುತ್ತದೆ.

ಅಂದರೆ, ವಧೂ ವರರಲ್ಲಿ ಇಬ್ಬರಲ್ಲೊಬ್ಬರು ಜ್ಯೇಷ್ಠಸಂತಾನ. ಅವರ ಮದುವೆಯನ್ನು ಜ್ಯೇಷ್ಠಮಾಸದಲ್ಲಿ ಅಥವಾ ಜ್ಯೇಷ್ಠನಕ್ಷತ್ರದಲ್ಲಿ ಮಾಡುವದು ಮಧ್ಯಮ ಎನ್ನುವದು ಅದರ ಅಭಿಪ್ರಾಯ.

ಮಧ್ಯಮ ಎಂದು ಹೇಳಿರುವದರಿಂದ ಒಂದು ಶಾಂತಿ ಮಾಡಿಸಿ ಮದುವೆ ಮಾಡುವದು ಉತ್ತಮ.

**ಜ್ಯೇಷ್ಠಾನಕ್ಷತ್ರದ ಶಾಂತಿಯನ್ನು ಮಾಡಿಸಿ, ಬ್ರಾಹ್ಮಣಭೋಜನವನ್ನು ಮಾಡಿಸಿ, ಗೋಗ್ರಾಸವನ್ನು ನೀಡಿ, ಮನೆದೇವರ ಸೇವೆ ಮಾಡಿ ಮದುವೆ ಮಾಡುವದರಿಂದ ನಿಶ್ಚಿತವಾಗಿ ದೋಷ ಉಂಟಾಗುವದಿಲ್ಲ.**

# ವಿಹಿತ ದ್ವಿಜ್ಯೇಷ್ಠ

ವರನೂ ಜ್ಯೇಷ್ಠ ಪುತ್ರ. ವಧುವೂ ಜ್ಯೇಷ್ಠಪುತ್ರಿ. ಇವರಿಬ್ಬರು ಸೇರಿ ದ್ವಿಜ್ಯೇಷ್ಠವಾದರೂ ಮದುವೆ ಮಾಡಬಹುದು. ಜ್ಯೇಷ್ಠಮಾಸದಲ್ಲಿ ಮಾಡಬಾರದು. ಅಥವಾ ಬೇರೆಮಾಸವಾದರೂ ಜ್ಯೇಷ್ಠಾನಕ್ಷತ್ರದಲ್ಲಿ ಮಾಡಬಾರದು.

## ತ್ರಿಜ್ಯೇಷ್ಠ ಸರ್ವಥಾ ನಿಷಿದ್ಧ

**“ತ್ರಿಜ್ಯೇಷ್ಠಂ ಚೇನ್ನೈವ ಯುಕ್ತಂ ಕದಾಪಿ”**

“ಮೂರು ಜ್ಯೇಷ್ಠಗಳು ಸರ್ವಥಾ ಕೂಡಬಾರದು, ಮದುವೆಗೆ ಯೋಗ್ಯವಲ್ಲ” ಎಂದು ಮುಹೂರ್ತಚಿಂತಾಮಣಿ ಅತ್ಯಂತ ಸ್ಪಷ್ಟವಾಗಿ ಹೇಳುತ್ತದೆ.

## ಉದಾಹರಣೆ — 1

ಹುಡುಗ ಜ್ಯೇಷ್ಠಪುತ್ರ. ಹುಡುಗಿ ಜ್ಯೇಷ್ಠಪುತ್ರಿ.

ಇವರ ಮದುವೆಯನ್ನು ಜ್ಯೇಷ್ಠಮಾಸದಲ್ಲಿ ಮಾಡಬಾರದು. ಬೇರೆ ಮಾಸದಲ್ಲಿಯೂ ಜ್ಯೇಷ್ಠ ನಕ್ಷತ್ರದಲ್ಲಿ ಮಾಡಬಾರದು.

ಕಾರಣ ವಧೂವರರಿಬ್ಬರೂ ಜ್ಯೇಷ್ಠಪುತ್ರರಾದ ಕಾರಣ ಎರಡು ಜ್ಯೇಷ್ಠಗಳಾದವು.

ಮದುವೆಯ ಮಾಸ ಜ್ಯೇಷ್ಠ ಮಾಸವಾದರೆ, ಅಥವಾ ಮದುವೆಯ ದಿನ ಜ್ಯೇಷ್ಠಾ ನಕ್ಷತ್ರವಿದ್ದರೆ ಮೂರು ಜ್ಯೇಷ್ಠಗಳಾಗುತ್ತವೆ. ಅದು ನಿಷಿದ್ಧ.

## ಉದಾಹರಣೆ — 2

ಹುಡುಗ ಜ್ಯೇಷ್ಠಮಾಸದಲ್ಲಿ ಅಥವಾ ಜ್ಯೇಷ್ಠ ನಕ್ಷತ್ರದಲ್ಲಿ ಹುಟ್ಟಿದ್ದಾನೆ. ಆದರೆ ಮೊದಲ ಮಗನಲ್ಲ[2].

ಹುಡುಗಿ ಜ್ಯೇಷ್ಠಪುತ್ರಿ.

ಇವರ ವಿವಾಹವನ್ನು ಜ್ಯೇಷ್ಠಮಾಸದಲ್ಲಿ ಅಥವಾ ಬೇರೆ ಮಾಸದಲ್ಲಿಯಾದರೂ ಜ್ಯೇಷ್ಠನಕ್ಷತ್ರದಲ್ಲಿ ಸರ್ವಥಾ ಮಾಡಬಾರದು.

ಕಾರಣ ಹುಡುಗನ ಜನ್ಮಮಾಸ ಜ್ಯೇಷ್ಠಮಾಸ ಅಥವಾ ಜನ್ಮನಕ್ಷತ್ರ ಜ್ಯೇಷ್ಠನಕ್ಷತ್ರ.

ಹುಡುಗಿ ಜ್ಯೇಷ್ಠಪುತ್ರಿ.

ಮದುವೆಯ ಮಾಸ ಜ್ಯೇಷ್ಠ ಮಾಸ ಅಥವಾ ಜ್ಯೇಷ್ಠ ನಕ್ಷತ್ರವಾದರೆ ಮೂರು ಜ್ಯೇಷ್ಠಗಳಾದ ಕಾರಣ ಮದುವೆ ನಿಷಿದ್ಧ.

---

[2] “ಆದ್ಯಗರ್ಭಸುತಕನ್ಯಯೋರ್ದ್ವಯೋಃ ಜನ್ಮಮಾಸಭತಿಥೌ ಕರಗ್ರಹಃ ನೋಚಿತಃ”

## ಉದಾಹರಣೆ — 3

ಹುಡುಗಿ ಜ್ಯೇಷ್ಠಮಾಸದಲ್ಲಿ ಅಥವಾ ಜ್ಯೇಷ್ಠನಕ್ಷತ್ರದಲ್ಲಿ ಹುಟ್ಟಿದ್ದಾಳೆ. ಆದರೆ ಮೊದಲ ಮಗಳಲ್ಲ.

ಹುಡುಗ ಜ್ಯೇಷ್ಠಪುತ್ರ.

ಇವರ ವಿವಾಹವನ್ನು ಜ್ಯೇಷ್ಠಮಾಸದಲ್ಲಿ ಅಥವಾ ಬೇರೆ ಮಾಸದಲ್ಲಿಯಾದರೂ ಜ್ಯೇಷ್ಠನಕ್ಷತ್ರದಲ್ಲಿ ಸರ್ವಥಾ ಮಾಡಬಾರದು.

ಕಾರಣ ಹುಡುಗಿಯ ಜನ್ಮಮಾಸ ಜ್ಯೇಷ್ಠಮಾಸ ಅಥವಾ ಜನ್ಮನಕ್ಷತ್ರ ಜ್ಯೇಷ್ಠನಕ್ಷತ್ರ.

ಹುಡುಗ ಜ್ಯೇಷ್ಠಪುತ್ರ.

ಮದುವೆಯ ಮಾಸ ಜ್ಯೇಷ್ಠ ಮಾಸ.

ಮೂರು ಜ್ಯೇಷ್ಠಗಳಾದ ಕಾರಣ ಮದುವೆ ಮಾಡಬಾರದು.

## ಜ್ಯೇಷ್ಠಸಂತಾನಕ್ಕೆ, ಮದುವೆಗೆ ಮಾತ್ರ ಈ ಗಣನೆ

ಈ ನಿಷೇಧ ಜ್ಯೇಷ್ಠ ಸಂತಾನಕ್ಕೆ ಮಾತ್ರ.
ಎರಡನೆಯ ಮಕ್ಕಳ ವಿಷಯದಲ್ಲಿ ದೋಷವಲ್ಲ.

ಅಂದರೆ ವಧೂವರರಿಬ್ಬರೂ ಜ್ಯೇಷ್ಠಮಾಸದಲ್ಲಿಯೇ ಹುಟ್ಟಿದ್ದಾರೆ ಎಂದುಕೊಳ್ಳೋಣ. ಇಬ್ಬರೂ ಮೊದಲ ಸಂತಾನವಲ್ಲ. ಅವರ ಮದುವೆಯನ್ನು ಜ್ಯೇಷ್ಠದಲ್ಲಿ ಮಾಡಬಹುದು ಎಂದು ಮುಹೂರ್ತಚಿಂತಾಮಣಿ ತಿಳಿಸುತ್ತದೆ.

ಆದ್ಯಗರ್ಭಸುತಕನ್ಯಯೋರ್ದ್ವಯೋಃ
ಜನ್ಮಮಾಸಭತಿಥೌ ಕರಗ್ರಹಃ
ನೋಚಿತೋಽಥ ವಿಬುಧೈಃ ಪ್ರಶಸ್ಯತೇ
ಚೇದ್ **ದ್ವಿತೀಯಜನುಷೋಃ ಸುತಪ್ರದಃ**

ಕೆಲವರು ಇದನ್ನೂ ಬಿಡುವದು ಶ್ರೇಷ್ಠ, ಬೇರೆ ಮಾಸದಲ್ಲಿ ಮಾಡುವದು ಉತ್ತಮ ಎಂದು ಹೇಳುತ್ತಾರೆ.

ಇನ್ನು ಗೃಹಪ್ರವೇಶ ಮುಂತಾದ ಕಾರ್ಯಗಳಿಗೆ ದ್ವಿಜ್ಯೇಷ್ಠ, ತ್ರಿಜ್ಯೇಷ್ಠಗಳ ದೋಷವಿಲ್ಲ.

## ಒಂದು ಕಿವಿಮಾತು

ಮದುವೆ ಎನ್ನುವದು ಜೀವನದಲ್ಲಿ ತುಂಬ ಮಹತ್ತ್ವದ ಘಟನೆ.

ಇವತ್ತಿಗಂತೂ ವಿಚ್ಛೇದನಗಳು, ಸಂತಾನದಲ್ಲಿ ತೊಂದರೆಗಳು ನಮ್ಮ ಸಮಾಜವನ್ನು ತುಂಬ ಕಾಡುತ್ತಿವೆ.

ಹೀಗಾಗಿ ಹುಡುಗ, ಹುಡುಗಿಯ ಆಯ್ಕೆಯಿಂದ ಆರಂಭಿಸಿ ಮುಹೂರ್ತಗಳ ವರೆಗೆ ಎಲ್ಲವನ್ನೂ ಪರೀಕ್ಷಿಸಿ ಮಾಡುವದು ಉತ್ತಮ.

ಸಮಾಜದಲ್ಲಿ ಉತ್ತಮರೀತಿಯಲ್ಲಿ ಮದುವೆಗಳು ನಡೆಯಲಿ, ಆ ಮದುವೆಗಳು ಸುಭದ್ರವಾಗಿರಲಿ, ದಂಪತಿಗಳು ಅನ್ಯೋನ್ಯವಾಗಿರಲಿ, ಶ್ರೇಷ್ಠ ಸಂತಾನದಿಂದ ರಾಷ್ಟ್ರ ಸಮೃದ್ಧವಾಗಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **NEW IFSC** **SBIN0040076**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**
No. 2, "Sri Madhwanuja Mandiram"
Kaveri Marga, Hemmige Village,
Talakadu, T Narasipura,
Mysore - 571122, Karnataka, India
nagendracharya@yahoo.co.in
WhatsApp: 9901 551 491